ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue-6, May- June 2025, Pp. 53-59
©*IIMRD*, Mysuru

IIMRD JOURNALS
www.iimrd.com

# ಚಾಮರಾಜನಗರ ಜಿಲ್ಲೆಯ ಗ್ರಾಮೀಣ ವಸತಿ ಯೋಜನೆಗಳ ಅವಲೋಕನ

**ವಿಜಯಭಾಸ್ಕರ್ ಹೆಚ್. ಕೆ[1] ಮತ್ತು ಪ್ರೊ. ಎಸ್. ಯಶೋದ[2]**
ಸಂಶೋಧನಾ ವಿದ್ಯಾರ್ಥಿ, ಪ್ರಾಧ್ಯಾಪಕರು
ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು

**ಸಾರಾಂಶ: (Abstract)**

*ಸಾರಾಂಶ:*

*ವಸತಿ ಎನ್ನುವುದು ಮಾನವನ ಮೂಲಭೂತ ಅಗತ್ಯಗಳಲ್ಲಿ ಮುಖ್ಯವಾದುದು. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಮನೆಯು ಕೇವಲ ಆಶ್ರಯವಲ್ಲದೇ ಆತನ ಆರ್ಥಿಕ ಭದ್ರತೆ, ಸಾಮಾಜಿಕ ಗೌರವ, ವ್ಯಕ್ತಿತ್ವದ ಗುರುತನ್ನು ಒದಗಿಸುತ್ತದೆ. 1948 ಮಾನವ ಹಕ್ಕುಗಳ ವಿಶ್ವ ಘೋಷಣೆಯಲ್ಲಿ ಆಹಾರ, ಬಟ್ಟೆ, ಆರೋಗ್ಯದ ಜೊತೆಗೆ ವಸತಿಯನ್ನು ಜೀವನ ಮಟ್ಟದ ಅವಶ್ಯಕತೆ ಅಂಶವೆಂದು ಗುರುತಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಚಾಮರಾಜನಗರ ಜಿಲ್ಲೆಯ ಗ್ರಾಮೀಣ ವಸತಿ ಯೋಜನೆಗಳ ಅವಲೋಕಿಸಲಾಗಿದೆ.*

**ಮುಖ್ಯಪದಗಳು (Keywords):** ಮಾನವ ಅಭಿವೃದ್ಧಿ, ಮೂಲಭೂತ ಸೌಲಭ್ಯ, ವಸತಿ ಯೋಜನೆ, ಚಾಮರಾಜನಗರ.

**ಪೀಠಿಕೆ**

ಆಹಾರ, ವಸತಿ ಮತ್ತು ಬಟ್ಟೆಗಳು ಜೀವನದ ಮೂಲಭೂತ ಅವಶ್ಯಕತೆಗಳಾಗಿವೆ. ಇವು ಮಾನವನ ಜೀವನದ ದೈಹಿಕ ಸಾಮರ್ಥ್ಯವನ್ನು ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವಂತೆ ಮಾಡುತ್ತದೆ ಎಂದು ಲಾಲ್ ಶಂಕರ್ ರವರು ಅಭಿಪ್ರಾಯಪಟ್ಟಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಗೂ ಮಾನವೀಯ ಅಸ್ತಿತ್ವಕ್ಕೆ ಮತ್ತು ಗೌರವಪೂರ್ಣ ಜೀವನಕ್ಕೆ ತಕ್ಕಂತೆ ವಾಸ ಸ್ಥಳವನ್ನು ಹೊಂದುವ ಹಕ್ಕಿರುತ್ತದೆ. ಇದು ಸಮಾಜದಲ್ಲಿ ಸಮಾನತೆ ನ್ಯಾಯ ಮತ್ತು ಮಾನವೀಯ ಮೌಲ್ಯಗಳ ಆಧಾರದ ಮೇಲೆ ನಿರ್ಮಾಣವಾಗಬೇಕು. ಅಂತರಾಷ್ಟ್ರೀಯ ಮಟ್ಟಗಳಲ್ಲಿ ವಸತಿಯನ್ನು ಮಾನವ ಅಭಿವೃದ್ಧಿ ಮತ್ತು ಸಮಾಜದ ಮೌಲ್ಯಮಾಪಕ ಘಟಕವೆಂದು ಸಹ ಪರಿಗಣಿಸಲಾಗುತ್ತದೆ (ಯು.ಎನ್.ಓ 1976). ನಾಗರಿಕತೆಯ ಪ್ರಾರಂಭದಿಂದಲೇ ವಸತಿಯ ಅಗತ್ಯತೆ ಮತ್ತು ಪ್ರಾಮುಖ್ಯತೆಯನ್ನು ಮಾನವನು ಅನುಭವಿಸಲ್ಪಟ್ಟಿರುವನು ಅಂತೆಯೇ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ವಾಸಿಸುವ ಶ್ರೀಮಂತ ಅಥವಾ ಬಡವನಾಗಿರುವ ಪ್ರತಿಯೊಬ್ಬರಿಗೂ ಸಹ ಅವರ ಜೀವನ ಮತ್ತು ಕುಟುಂಬದ ಯೋಗ ಕ್ಷೇಮವನ್ನು ಉತ್ತೇಜಿಸಲು ತನ್ನದೇ ಆದ ಮನೆಯ ಅಗತ್ಯವಿರುತ್ತದೆ. ಇತಿಹಾಸಾತ್ಮಕವಾಗಿ ಜನರು ತಮ್ಮ ಮನೆಗಳನ್ನು ನಿರ್ಮಾಣ ಮಾಡುವ ವಿಧಾನವು ಶತಮಾನಗಳ ಅನುಭವದಿಂದ ರೂಪುಗೊಂಡಿದ್ದು ಈ ಪ್ರಕ್ರಿಯೆಯು ಸಮುದಾಯದ ಸಂಸ್ಕೃತಿಯೊಂದಿಗೆ ಮತ್ತು

*Please cite this article as:* ವಿಜಯಭಾಸ್ಕರ್ ಹೆಚ್. ಕೆ. ಮತ್ತು ಎಸ್. ಯಶೋದ. (2025). ಚಾಮರಾಜನಗರ ಜಿಲ್ಲೆಯ ಗ್ರಾಮೀಣ ವಸತಿ ಯೋಜನೆಗಳ ಅವಲೋಕನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(6). ಪು.ಸಂ.* 53–59

ಪರಿಸರದೊಂದಿಗೆ ನಡೆಯುವ ನಿರಂತರ ಪರಸ್ಪರ ಕ್ರಿಯೆಯ ಫಲವಾಗಿದೆ (ಚಂಧೋಕೆ,1977) "ಸಂವಿಧಾನದ ಅನುಚ್ಛೇದ 21"ರಲ್ಲಿ ಜೀವನ ಮತ್ತು ವೈಯಕ್ತಿಕ ಸ್ವತಂತ್ರದ ರಕ್ಷಣೆ ಹಕ್ಕುಗಳ ಬಗ್ಗೆ ವಿವರಿಸಲಾಗಿದೆ ಇಲ್ಲಿ ಪ್ರತಿಯೊಬ್ಬರಿಗೂ ಅವಶ್ಯಕ ಮೂಲಭೂತ ಸೌಕರ್ಯಗಳಲ್ಲಿ ಒಂದಾದ ವಸತಿ ಹೊಂದುವಂತಹ ಹಕ್ಕನ್ನು ಹೊಂದಿರುವುದರಿಂದ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಡವರಿಗೆ, ವಸತಿರಹಿತ ಕುಟುಂಬದವರಿಗೆ ವಸತಿ ಕಲ್ಪಿಸುವ ಮಹತ್ವದ ಯೋಜನೆಯನ್ನು ಕೈಗೊಂಡಿದೆ.

**ವಸತಿಯ ವ್ಯಾಖ್ಯಾನಗಳು**

ಭೂಗೋಳ ಶಾಸ್ತ್ರಜ್ಞರಾದ ಆರ್.ಪಿ. ಮಿಶ್ರಾ ಮತ್ತು ಭೂಷಣ್ ರವರ ಪ್ರಕಾರ "ಮಾನವನು ಒಂದು ಸ್ಥಳದಲ್ಲಿ ನೆಲೆಸಿ ನಿರ್ಮಿಸಿರುವ ಯಾವುದೇ ಕಟ್ಟಡಗಳನ್ನು ವಸತಿಗಳೆಂದು" ಕರೆಯಬಹುದು ಎಂದಿದ್ದಾರೆ.[1] ಭಾರತದ ಜನಗಣತಿಯ ಪ್ರಕಾರ "ವಾಸದ ಮನೆಯೆಂದರೆ ಪೂರ್ತಿಯಾಗಿ ಅಥವಾ ಭಾಗಶಃ ಒಂದು ಅಥವಾ ಒಂದಕ್ಕಿಂತ ಹೆಚ್ಚು ಕುಟುಂಬಗಳು ವಾಸಿಸುವ ಕಟ್ಟಡಗಳು" ಎಂದರ್ಥ.[2]

**ವಸತಿಯ ಪ್ರಾಮುಖ್ಯತೆ**

ಅನಾದಿಕಾಲದಿಂದಲೂ ಮಾನವನು ವಸತಿಯ ಮೌಲ್ಯ ಮತ್ತು ಅದರ ಅವಶ್ಯಕತೆಯನ್ನು ಅರ್ಥ ಮಾಡಿಕೊಂಡಿದ್ದಾನೆ. ಮಾನವನ ಅಸ್ತಿತ್ವದ ಉಳಿವಿಗಾಗಿ ವಸತಿಯು ಅತ್ಯಂತ ಅಗತ್ಯವಾಗಿದೆ. ವಸತಿಯು ಗ್ರಾಮೀಣ ಜನರಿಗೆ ಮಾನಸಿಕ ತೃಪ್ತಿ, ದೈಹಿಕ ಚೈತನ್ಯ ಮತ್ತು ಮಾನಸಿಕ ಸ್ಥೈರ್ಯವನ್ನು ನೀಡುತ್ತದೆ. ಮಾನವನಿಗೆ ಹಣಕಾಸಿನ ಬಿಕ್ಕಟ್ಟು ಸಂಭವಿಸಿದಾಗ ಸಾಲಗಳಿಗೆ ಮೇಲಾಧಾರ ಭದ್ರತೆಯಾಗಿ ಬಳಸ ಬಹುದು. ಬಡತನದ ಕಲ್ಪನೆಯ ಮೇಲೆ ವಸತಿ ನೇರವಾದ ಪ್ರಭಾವ ಬೀರುತ್ತದೆ. ಅದು ಹೇಗೆಂದರೆ ಜನರ ಜೀವನ ಮಟ್ಟ ಹೆಚ್ಚಾದಷ್ಟು ಮನೆಯ ಸ್ಥಿತಿಯು ಉತ್ತಮವಾಗುತ್ತದೆ. ಮನೆಯ ಸ್ಥಿತಿಯು ಅನೈರ್ಮಲ್ಯ ಕಳಪೆಯಾದಷ್ಟು ಮಾನವನ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ.

**ಗ್ರಾಮೀಣ ವಸತಿಯ ಸನ್ನಿವೇಶ**

ಭಾರತದ ಜನಸಂಖ್ಯೆಯ ಶೇಕಡ 0.19ರಷ್ಟು ಜನರು ನಿರಾಶ್ರಿತರಾಗಿದ್ದಾರೆ. ಇದಲ್ಲದೆ ಭಾರತದಲ್ಲಿ ಲಭ್ಯವಿರುವ ಮನೆಗಳಲ್ಲಿ ಶೇಕಡ 50ರಷ್ಟು ಮನೆಗಳು ಉತ್ತಮ ಸ್ಥಿತಿಯಲ್ಲಿದ್ದರೆ, ಉಳಿದವು ವಾಸಕ್ಕೆ ಯೋಗ್ಯವಲ್ಲದ ಅಥವಾ ಶೀತಲಗೊಂಡಿರುವಂತಹ ಸ್ಥಿತಿಗತಿಗಳಲ್ಲಿವೆ. ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು ಶೇಕಡ 48.88ರಷ್ಟು ಮನೆಗಳು ವಾಸಕ್ಕೆ ಯೋಗ್ಯವಾಗಿದ್ದರೆ, ಶೇಕಡ 6.3ರಷ್ಟು ಮನೆಗಳು ಶಿಥಿಲಗೊಂಡಿವೆ ಎಂದು 2001ರ ಜನಗಣತಿಯಲ್ಲಿ ತಿಳಿಸಲಾಗಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (2005–06)ರಲ್ಲಿ ತಿಳಿದು ಬಂದಿರುವಂತೆ ಒಟ್ಟಾರೆ ಶೇಕಡ 14ರಷ್ಟು ಕುಟುಂಬಗಳು ಕಚ್ಚಾ ಮನೆಯಲ್ಲಿ ವಾಸಿಸುತ್ತಿದ್ದರೆ, ಶೇಕಡ 40ರಷ್ಟು ಕುಟುಂಬಗಳು ಅರೆ ಪಕ್ಕಾ ಮನೆಗಳಲ್ಲಿ ಮತ್ತು ಉಳಿದ ಶೇಕಡ 46ರಷ್ಟು ಕುಟುಂಬಗಳು ಪಕ್ಕಾ ಮನೆಯಲ್ಲಿ ವಾಸಿಸುತ್ತಿರುವುದಾಗಿ ತಿಳಿಸಿರುವರು. ಶೇಕಡಾ 8ರಷ್ಟು ಕುಟುಂಬಗಳು

---

[1] ರಂಗನಾಥ ಹಾಗೂ ಪಿ. ಮಲ್ಲಪ್ಪ : ಮಾನವ ಭೂಗೋಳಶಾಸ್ತ್ರ.

[2] ಸೂರ್ಯನಾಥ ಕಾಮತ್(ಮು.ಸಂ.): ಭಾರತದ ಗ್ಯಾಸೆಟಿಯರ್, ಧಾರವಾಡ ಜಿಲ್ಲೆ (ಪರಿಷ್ಕೃತ್ರಿ).

ನಗರ ಪ್ರದೇಶಗಳಲ್ಲಿ ಪಕ್ಕಾ ಮನೆಯಲ್ಲಿ ವಾಸಿಸುತ್ತಿದ್ದರೆ, ಶೇಕಡ 52ರಷ್ಟು ಕುಟುಂಬಗಳು ಗ್ರಾಮೀಣ ಪ್ರದೇಶಗಳಲ್ಲಿ ಅರೆ ಪಕ್ಕಾ ಮನೆಯಲ್ಲಿ ವಾಸಿಸುತ್ತಿರುವರು. 2011ರ ಜನಗಣತಿಯಲ್ಲಿ ಶೇಕಡ 0.8ಕೋಟಿ ಕುಟುಂಬಗಳು ಶಿಥಿಲಗೊಂಡ ಮನೆಗಳಲ್ಲಿ ವಾಸಿಸುತ್ತಿರುವರು, ಈ ಮನೆಗಳು ಕುಸಿಯುವಂತಹ ಎಲ್ಲಾ ಲಕ್ಷಣಗಳನ್ನು ಹೊಂದಿವೆ. ಇವು ಯಾವುದೇ ರೀತಿಯಾಗಿ ಮನೆಗಳನ್ನು ಪುನರ್ ನಿರ್ಮಾಣ ಮಾಡುವ ಮತ್ತು ದುರಸ್ತಿ ಮಾಡುವ ಸ್ಥಿತಿಯಲ್ಲಿ ಇರುವುದಿಲ್ಲ. ಸರಿ ಸುಮಾರು 4.41ಕೋಟಿ ಮನೆಗಳು ಕಚ್ಚಾ ಛಾವಣಿ ಹೊಂದಿವೆ, ಇದಲ್ಲದೆ 2.71ಕೋಟಿ ಮನೆಗಳು ಹುಲ್ಲು, ಬಿದಿರು ಮತ್ತು ಪ್ಲಾಸ್ಟಿಕ್ ವಸ್ತುಗಳಿಂದ ನಿರ್ಮಿಸಿರುವ ಮನೆಗಳಾಗಿವೆ. 5.83ಕೋಟಿ ಮನೆಗಳು ಮಣ್ಣು ಗೋಡೆಗಳಿಂದ ಮತ್ತು ಸುಡದೆ ಇರುವ ಇಟ್ಟಿಗೆಗಳಿಂದ ನಿರ್ಮಿಸಿರುವಂತಹದಾಗಿದೆ. ಸಾಮಾಜಿಕ–ಆರ್ಥಿಕ ಜಾತಿ ಗಣತಿ(ಎಸ್ಇಸಿಸಿ) ಅಂಕಿ ಅಂಶಗಳಲ್ಲಿ 4.01ಕೋಟಿ ಮನೆಗಳು ಕಚ್ಚಾ ಗೋಡೆ ಮತ್ತು ಕಚ್ಚಾ ಛಾವಣಿಗಳನ್ನು ಹಾಗೂ ಒಂದು ಅಥವಾ ಎರಡು ಕೊಠಡಿ ಹೊಂದಿರುವುದರ ಬಗ್ಗೆ ತಿಳಿಸುತ್ತದೆ. ಈ ಮೇಲ್ಕಂಡ ಎಲ್ಲಾ ಸನ್ನಿವೇಶಗಳನ್ನು ಗಮನಿಸಿದಾಗ ಭಾರತವು ಒಂದು ಕೃಷಿ ಪ್ರಧಾನವಾದಂತ ರಾಷ್ಟ್ರವಾಗಿರುವುದರಿಂದ ಅಲ್ಲಿನ ಜನರ ಯೋಗ ಕ್ಷೇಮವನ್ನು ಸುಧಾರಿಸಲು ಗ್ರಾಮೀಣ ಪ್ರದೇಶಗಳಿಗೆ ವಸತಿಯ ಗುರಿಯನ್ನು ಹೆಚ್ಚು ಹೆಚ್ಚು ನೀಡಬೇಕಾಗಿರುತ್ತದೆ.

**ಸಂಶೋಧನಾ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಮಾಧ್ಯಮಿಕ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಲಾಗಿದೆ. ಈ ಅಧ್ಯಯನದಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ವಾರ್ಷಿಕ ಮತ್ತು ಭೌತಿಕ ವರದಿಗಳು ಹಾಗೂ ಕರ್ನಾಟಕ ಅಂಕಿ ಅಂಶಗಳ ನೋಟ ಮತ್ತು ಚಾಮರಾಜನಗರ ಜಿಲ್ಲಾ ಅಂಕಿ ಅಂಶಗಳ ನೋಟ ಎಂಬ ವಾರ್ಷಿಕ ವರದಿಗಳಿಂದ ಸಂಗ್ರಹಿತ ಮಾಹಿತಿಗಳನ್ನು ವಿಶ್ಲೇಷಿಸಲಾಗಿದೆ.

**ಕೋಷ್ಟಕ 1.1: ಕರ್ನಾಟಕದಲ್ಲಿನ ವಸತಿ ರಹಿತ ಕುಟುಂಬಗಳ ಅಂಕಿ–ಅಂಶಗಳ ವಿವರ.**

| ಪ್ರಾದೇಶಿಕ ವಿಭಾಗ ಕೇಂದ್ರ | ವಸತಿ ರಹಿತ ಕುಟುಂಬಗಳ ಸಂಖ್ಯೆ |
|---|---|
| ಬೆಂಗಳೂರು | 3,91,047 |
| ಬೆಳಗಾವಿ | 5,93,397 |
| ಮೈಸೂರು | 3,55,112 |
| ಕಲಬುರ್ಗಿ | 5,84,082 |
| **ಒಟ್ಟು** | **19,23,638** |

ಮೂಲ: ashraya.karnataka.gov.in/Report/frmSurvey Housless Report.

ಕೋಷ್ಟಕ 1.1ರಲ್ಲಿ ಕರ್ನಾಟಕದಲ್ಲಿ ವಸತಿ ರಹಿತ ಕುಟುಂಬಗಳ ಅಂಕಿ ಅಂಶಗಳನ್ನು ವಿವರಿಸಲಾಗಿದೆ. ಕರ್ನಾಟಕವನ್ನು ನಾಲ್ಕು ಪ್ರಾದೇಶಿಕ ವಿಭಾಗ ಕೇಂದ್ರಗಳಾಗಿ ವಿಂಗಡಿಸಿಕೊಂಡು, ಅವುಗಳಲ್ಲಿ ಬೆಂಗಳೂರು ವಿಭಾಗದಲ್ಲಿ 3,91,047 ವಸತಿ ರಹಿತ ಕುಟುಂಬಗಳು ವಾಸಿಸುತ್ತಿದ್ದರೆ, ಬೆಳಗಾವಿ ವಿಭಾಗದಲ್ಲಿ 5,93,397 ವಸತಿ ರಹಿತ ಕುಟುಂಬಗಳು ವಾಸಿಸುತ್ತಿವೆ. ಹಾಗೆಯೇ ಮೈಸೂರು ವಿಭಾಗದಲ್ಲಿ 3,55,112 ಕುಟುಂಬಗಳು


ವಸತಿ ರಹಿತ ವಾಸಿಸುತ್ತಿದ್ದರೆ, ಕಲಬುರ್ಗಿ ವಿಭಾಗದಲ್ಲಿ 5,84,082 ವಸತಿ ರಹಿತ ಕುಟುಂಬಗಳು ವಾಸಿಸುತ್ತಿವೆ. ಒಟ್ಟಾರೆಯಾಗಿ 19,23,638 ವಸತಿ ರಹಿತ ಕುಟುಂಬಗಳು ಪ್ರಸ್ತುತ ಕರ್ನಾಟಕದಲ್ಲಿ ವಾಸಿಸುತ್ತಿರುವುದನ್ನು ಗಮನಿಸಬಹುದು.

**ಕೋಷ್ಟಕ 1.2: ಚಾಮರಾಜನಗರ ಜಿಲ್ಲೆಯಲ್ಲಿ ವಸತಿ ರಹಿತ ಕುಟುಂಬಗಳ ಅಂಕಿ–ಅಂಶಗಳ ವಿವರ.**

| ತಾಲೂಕು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಸಾಮಾನ್ಯ ವರ್ಗ | ಅಲ್ಪ ಸಂಖ್ಯಾತರು | ಒಟ್ಟು ಆವೃತಿ ಮತ್ತು ಶೇಕಡವಾರುಗಳಲ್ಲಿ |
|---|---|---|---|---|---|
| **ಚಾಮರಾಜನಗರ** | 3340 | 1415 | 11640 | 150 | **16,545 (31.68%)** |
| **ಗುಂಡ್ಲುಪೇಟೆ** | 2009 | 1396 | 8696 | 45 | **12,146 (23.28%)** |
| **ಯಳಂದೂರು** | 1571 | 1019 | 2399 | 27 | **5,016 (9.60%)** |
| **ಕೊಳ್ಳೇಗಾಲ** | 1993 | 697 | 3339 | 338 | **6,367 (12.19%)** |
| **ಹನೂರು** | 2223 | 1692 | 6941 | 1280 | **12,136 (23.25%)** |
| **ಒಟ್ಟು** | **11,136** | **6,219** | **33,015** | 1,840 | **52,210(100%)** |

ಮೂಲ: ashraya.karnataka.gov.in/Report/frmSurvey Housless Report.

**ರೇಖಾಚಿತ್ರ 1.1: ಚಾಮರಾಜನಗರ ಜಿಲ್ಲೆಯಲ್ಲಿ ವಸತಿ ರಹಿತ ಕುಟುಂಬಗಳು ಶೇಕಡವಾರುಗಳಲ್ಲಿ**



ಈ ಮೇಲ್ಕಂಡ ರೇಖಾಚಿತ್ರ 1.1ರಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ವಸತಿ ರಹಿತ ಕುಟುಂಬಗಳ ವಿವರವನ್ನು ಶೇಕಡವಾರುಗಳಲ್ಲಿ ತಿಳಿಸಲಾಗಿದೆ. ಚಾಮರಾಜನಗರ ತಾಲೂಕಿನಲ್ಲಿ ಶೇಕಡ 31.68ರಷ್ಟು ಕುಟುಂಬಗಳು ವಸತಿ ರಹಿತರಾಗಿದ್ದರೆ, ಗುಂಡ್ಲುಪೇಟೆ ತಾಲೂಕಿನಲ್ಲಿ ಶೇಕಡ 23.28ರಷ್ಟು ಕುಟುಂಬಗಳು ವಸತಿ ರಹಿತರಾಗಿರುವರು. ಹಾಗೆಯೇ ಯಳಂದೂರು  ತಾಲೂಕಿನಲ್ಲಿ ಶೇಕಡ 9.60ರಷ್ಟು ಕುಟುಂಬಗಳು ವಸತಿ ರಹಿತರಾಗಿದ್ದರೆ, ಕೊಳ್ಳೇಗಾಲ ಮತ್ತು ಹನೂರು ತಾಲೂಕಿನಲ್ಲಿ ಕ್ರಮವಾಗಿ 12.19ರಷ್ಟು ಮತ್ತು 23.25ರಷ್ಟು ವಸತಿ ರಹಿತ ಕುಟುಂಬಗಳಿರುವುದನ್ನು ಗಮನಿಸಬಹುದಾಗಿದೆ.

**ಇಂದಿರಾ ಆವಾಸ್ ಯೋಜನೆ/ಪ್ರಧಾನ ಮಂತ್ರಿ ಅವಾಸ್ ಯೋಜನೆ (ಗ್ರಾಮೀಣ)**

ಇದು ಕೇಂದ್ರ ಸರ್ಕಾರದ ಒಂದು ಯೋಜನೆಯಾಗಿದ್ದು, 1989–90ರಲ್ಲಿ ಜಾರಿಗೊಳಿಸಲಾಯಿತು. ನಂತರ ಇದನ್ನು 01.01.1996 ರಿಂದ ಸ್ವತಂತ್ರ ಯೋಜನೆಯ ರೂಪದಲ್ಲಿ ಅನುಷ್ಠಾನಗೊಳಿಸಲಾಯಿತು. ಈ ಯೋಜನೆಯನ್ನು ಬಡತನ ರೇಖೆಗಿಂತ ಕೆಳಗಿನವರಿಗಾಗಿ, ಗ್ರಾಮೀಣ ಪ್ರದೇಶದ ವಸತಿ ರಹಿತ ಕುಟುಂಬದವರಿಗಾಗಿ ಅನುಷ್ಠಾನಗೊಳಿಸಲಾಗುತ್ತಿತ್ತು. 2015–16ರಲ್ಲಿ ಪ್ರಧಾನ ಮಂತ್ರಿ ಅವಾಸ್ ಯೋಜನೆ (ಗ್ರಾಮೀಣ) ಎಂಬುದಾಗಿ ಮರು ನಾಮಕರಣ ಮಾಡಲಾಗಿದೆ. ಈ ಯೋಜನೆಯನ್ನು 1996 ರಿಂದ 2004–05ರವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿತ್ತು, ಇದನ್ನು 2004–05ನೇ ಸಾಲಿನಿಂದ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ವರ್ಗಾಯಿಸಲಾಗಿರುತ್ತದೆ.  ಕೇಂದ್ರ ಸರ್ಕಾರವು ಶೇ.60ರಷ್ಟು, ರಾಜ್ಯ ಸರ್ಕಾರವು ಶೇ. 40ರಷ್ಟು ಪಾಲು ನೀಡುತ್ತದೆ. ಆದರೆ ಕೇಂದ್ರಾಡಳಿತದ ಪ್ರದೇಶಗಳಲ್ಲಿ ಶೇ.90ರಷ್ಟು ಕೇಂದ್ರ ಸರ್ಕಾರದ್ದಾಗಿದ್ದು, ರಾಜ್ಯ ಸರ್ಕಾರವು ಶೇ. 10ರಷ್ಟು ಹಣವನ್ನು ಒದಗಿಸುತ್ತಾದೆ. 2016–17ನೇ ಸಾಲಿನಿಂದ ಕೇಂದ್ರ ಸರ್ಕಾರವು ಪ್ರತಿ ಮನೆಯ ಘಟಕದ ವೆಚ್ಚವನ್ನು ಗುಡ್ಡಗಾಡು ಪ್ರದೇಶಗಳಿಗೆ ರೂ. 1,30,000/–, ಗುಡ್ಡಗಾಡು ಅಲ್ಲದ ಪ್ರದೇಶಗಳಿಗೆ ರೂ.1,20,000/–ಕ್ಕೆ ಹೆಚ್ಚಿಸಿದ್ದು, ಇದರಲ್ಲಿ ಕೇಂದ್ರ ಸರ್ಕಾರದ ಪಾಲು ರೂ.72,000/–ಗಳು ಮತ್ತು ರಾಜ್ಯ ಸರ್ಕಾರದ ಪಾಲು ರೂ.48,000/– ಗಳಾಗಿರುತ್ತದೆ. ಪ.ಜಾತಿ/ಪ.ಪಂ ಫಲಾನುಭವಿಗಳಿಗೆ ಪ್ರತಿ ಮನೆಯ ಸಹಾಯಧನವನ್ನು 1,50,000/–ಕ್ಕೆ ಹೆಚ್ಚಿಸಿದ್ದು, ಇದರಲ್ಲಿ ಕೇಂದ್ರದ ಪಾಲು ರೂ.72,000/– ಮತ್ತು ರಾಜ್ಯದ ಪಾಲು ರೂ.78,000/– ಗಳಾಗಿರುತ್ತದೆ.

**ಡಾ. ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ**

ಕರ್ನಾಟಕ ಸರ್ಕಾರವು ಈ ಯೋಜನೆಯನ್ನು 2015–16ರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಶ್ರೇಯಾಭಿವೃದ್ಧಿಗಾಗಿ ಜಾರಿಗೊಳಿಸಿದೆ. ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳನ್ನು ಆಯ್ಕೆ ಮಾಡಿ ಈ ಯೋಜನೆಯ ಅಡಿ ಸೂರು ಕಲ್ಪಿಸುವುದು ಮುಖ್ಯ ಉದ್ದೇಶವಾಗಿದೆ. ಈ ಯೋಜನೆಯಲ್ಲಿ ಪರಿಶಿಷ್ಟ ಜಾತಿಯವರಿಗೆ ಶೇ. 70 ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ.30 ಮೀಸಲಿಡಲಾಗುವುದು. ಸಂಪೂರ್ಣ ಸಹಾಯಧನವನ್ನು ಕರ್ನಾಟಕ ರಾಜ್ಯ ಸರ್ಕಾರವು ಭರಿಸುತ್ತದೆ.. ಫಲಾನುಭವಿಗಳನ್ನು ಗ್ರಾಮ ಪಂಚಾಯಿತಿಯ ವಸತಿ ರಹಿತರ ಪಟ್ಟಿಯಿಂದ ಆಯ್ಕೆ ಮತ್ತು ಗ್ರಾಮ ಸಭೆಯನ್ನು ಆಯೋಜಿಸಿ ಆ ಸಭೆಯಲ್ಲಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಸಹಾಯಧನದ ಮೊತ್ತ ಗ್ರಾಮೀಣ ಪ್ರದೇಶದಲ್ಲಿ ಪ್ರತಿ ಮನೆಗೆ ರೂ. 1,75,000/–ನಿಗದಿ ಪಡಿಸಲಾಗಿದೆ.

**ಬಸವ ವಸತಿ ಯೋಜನೆ**

ಕರ್ನಾಟಕ ಸರ್ಕಾರವು ಈ ಯೋಜನೆಯನ್ನು 1991–92ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು. ನಂತರ 2010–2011ರಲ್ಲಿ ಇದನ್ನು **"**ಬಸವ ವಸತಿ ಯೋಜನೆ**"** ಎಂಬುದಾಗಿ ಮರು ನಾಮಕರಣ ಮಾಡಲಾಯಿತು. ಇದರ ಮೂಲ ಉದ್ದೇಶ ಉತ್ತಮ ಗುಣಮಟ್ಟದ ವಸತಿಯನ್ನು ಒದಗಿಸುವ ಮೂಲಕ 5 ವರ್ಷಗಳ ಅವಧಿಯಲ್ಲಿ ಕರ್ನಾಟಕವನ್ನು ಗುಡಿಸಲು ಮುಕ್ತ ರಾಜ್ಯವನ್ನಾಗಿ ಪರಿವರ್ತಿಸುವುದು ಹಾಗೂ ಅರ್ಹ ಫಲಾನುಭವಿಗಳಿಗೆ ಪರಿಣಾಮಕಾರಿಯಾಗಿ ಮತ್ತು ಪಾರದರ್ಶಕವಾಗಿ ಯೋಜನೆಯನ್ನು ಅನುಷ್ಠಾನಗೊಳಿಸುವುದಾಗಿದೆ. ಸಂಪೂರ್ಣ ಸಹಾಯಧನವನ್ನು ಕರ್ನಾಟಕ ರಾಜ್ಯ ಸರ್ಕಾರವು ಭರಿಸುತ್ತದೆ. ಸಾಮಾನ್ಯ ವರ್ಗದವರಿಗೆ ಶೇ. 90ರಷ್ಟು, ಅಲ್ಪಸಂಖ್ಯಾತರಿಗೆ ಶೇ. 10ರಷ್ಟು ಮೀಸಲಾತಿ ನೀಡುವುದರ ಮೂಲಕ ಸಾಮಾನ್ಯ ವರ್ಗಕ್ಕೆ ಮಾತ್ರ ಮೀಸಲೀಡಿಸಲಾಗಿದೆ. 2024–25ನೇ ಸಾಲಿನಿಂದ ಸಹಾಯಧನದ ಮೊತ್ತ ಗ್ರಾಮೀಣ ಪ್ರದೇಶದಲ್ಲಿ ಪ್ರತಿ ಮನೆಗೆ ರೂ. 1,75,000/– ನಿಗದಿಪಡಿಸಲಾಗಿದೆ.

**ಕೋಷ್ಟಕ 1.3 ಚಾಮರಾಜನಗರ ಜಿಲ್ಲೆಯಲ್ಲಿ ಗ್ರಾಮೀಣ ವಸತಿ ಯೋಜನೆ ಅಡಿಯಲ್ಲಿ 2022–23ನೇ ಸಾಲಿನಲ್ಲಿ ಪೂರ್ಣಗೊಂಡ ಮನೆಗಳ ವಿವರ.**

| **ವಸತಿ ಯೋಜನೆಗಳು** | **ಪರಿಶಿಷ್ಟ ಜಾತಿ** | **ಪರಿಶಿಷ್ಟ ಪಂಗಡ** | **ಹಿಂದುಳಿದ ವರ್ಗ** | **ಒಟ್ಟು** |
|---|---|---|---|---|
| ಪ್ರಧಾನ ಮಂತ್ರಿ ಆವಾಸ್ | 342 | 164 | 364 | **870** |
| ಡಾ.ಬಿ.ಆರ್ ಅಂಬೇಡ್ಕರ್ ನಿವಾಸ್ | 591 | 249 | –– | **840** |
| ಬಸವ ವಸತಿ | –– | –– | 1994 | **1994** |
| **ಒಟ್ಟು** | **933** | **413** | **2358** | **3704** |

ಮೂಲ: ಕರ್ನಾಟಕ ಅಂಕಿ–ಅಂಶಗಳ ನೋಟ 2022–23.

ಈ ಮೇಲ್ಕಂಡ ಕೋಷ್ಟಕ 1.3 ರಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಗ್ರಾಮೀಣ ವಸತಿ ಯೋಜನೆಗಳ ಅಡಿಯಲ್ಲಿ 2022–23ನೇ ಸಾಲಿನಲ್ಲಿ ಪೂರ್ಣಗೊಂಡ ಮನೆಗಳ ವಿವರವನ್ನು ಗಮನಿಸಿದಾಗ. ಪ್ರಧಾನ ಮಂತ್ರಿ ಗ್ರಾಮೀಣ ಅವಾಸ್ ಯೋಜನೆ ಅಡಿಯಲ್ಲಿ 342 ಮನೆಗಳನ್ನು ಪರಿಶಿಷ್ಟ ಜಾತಿಯವರು, 164 ಮನೆಗಳನ್ನು ಪರಿಶಿಷ್ಟ ಪಂಗಡದವರು ಹಾಗೂ 364 ಮನೆಗಳನ್ನು ಹಿಂದುಳಿದ ವರ್ಗದವರು ನಿರ್ಮಿಸಿಕೊಂಡಿರುವರು. ಡಾ. ಬಿ. ಆರ್. ಅಂಬೇಡ್ಕರ್ ಅವಾಸ್ ಯೋಜನೆಯ ಅಡಿಯಲ್ಲಿ ಪರಿಶಿಷ್ಟ ಜಾತಿಯವರು 591 ಮನೆಗಳನ್ನು ನಿರ್ಮಿಸಿಕೊಂಡರೆ 249 ಮನೆಗಳನ್ನು ಪರಿಶಿಷ್ಟ ಪಂಗಡದವರು ನಿರ್ಮಿಸಿಕೊಂಡಿರುವರು. ಹಾಗೆಯೇ ಬಸವ ವಸತಿ ಯೋಜನೆ ಅಡಿಯಲ್ಲಿ 1994 ಮನೆಗಳನ್ನು ಹಿಂದುಳಿದ ವರ್ಗಕ್ಕೆ ಸೇರಿದವರು ನಿರ್ಮಿಸಿಕೊಂಡಿದ್ದಾರೆ. ಒಟ್ಟಾರೆಯಾಗಿ ವಿವಿಧ ಗ್ರಾಮೀಣ ವಸತಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದವರು 933 ಮನೆಗಳನ್ನು ನಿರ್ಮಿಸಿಕೊಂಡಿದ್ದರೆ, ಪರಿಶಿಷ್ಟ ಪಂಗಡಕ್ಕೆ ಸೇರಿದವರು 413 ಮನೆಗಳನ್ನು ನಿರ್ಮಿಸಿಕೊಂಡಿರುವರು ಮತ್ತು 2358 ಮನೆಗಳನ್ನು ಹಿಂದುಳಿದ ವರ್ಗಕ್ಕೆ ಸೇರಿದವರು ನಿರ್ಮಿಸಿಕೊಂಡಿರುವರು. ಚಾಮರಾಜನಗರ ಜಿಲ್ಲೆಯಲ್ಲಿ 2022–23ನೇ ಸಾಲಿನಲ್ಲಿ 3704 ಮನೆಗಳು ಪೂರ್ಣಗೊಂಡಿರುವುದನ್ನು ತಿಳಿಯಬಹುದು.

**ಉಪಸಂಹಾರ**

ವಸತಿ ಎಂಬ ಪರಿಕಲ್ಪನೆಯು ಕೇವಲ ಗೋಡೆ ಮತ್ತು ಛಾವಣಿಗಳನ್ನು ಒಳಗೊಂಡಿರುವ ಭೌತಿಕ ಘಟಕಕ್ಕೆ ಮಾತ್ರ ಸೀಮಿತವಾಗಿರದೆ. ಅದು ಮಾನವನ ಸಂಬಂಧಗಳು, ಸಂಸ್ಕೃತಿ, ಆರ್ಥಿಕ ಅಭಿವೃದ್ಧಿಯ ಪ್ರಮುಖ ಸೂಚಕವಾಗಿದೆ. ಇದು ಮಾನವನ ಅಭಿವೃದ್ಧಿಯ ಪ್ರಮುಖ ಅಂಶವಾಗಿ ಜನರ ಜೀವನದ ಗುಣಮಟ್ಟವನ್ನು ಗುರುತಿಸುತ್ತದೆ. ಆದ ಕಾರಣವೇ ಎಲ್ಲಾ ರಾಷ್ಟ್ರಗಳು ತನ್ನ ಪ್ರಜೆಗಳಿಗೆ ವಸತಿಯನ್ನು ಒದಗಿಸುವುದು ಒಂದು ಆದ್ಯ ಕರ್ತವ್ಯವೆಂದು ಭಾವಿಸಿ. ಅದೇ ರೀತಿಯಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗ್ರಾಮೀಣ ಜನರ ಕಲ್ಯಾಣವನ್ನು ಸಾಧಿಸುವ ಸಲುವಾಗಿ ವಿವಿಧ ಗ್ರಾಮೀಣ ವಸತಿ ಯೋಜನೆಗಳನ್ನು ಜಾರಿಗೊಳಿಸುವೆ. ಈ ವಸತಿ ಯೋಜನೆಗಳೆಲ್ಲವೂ ಗ್ರಾಮೀಣ ಜನರ ಏಳಿಗೆಗಾಗಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿ ಶ್ರಮಿಸುತ್ತಿವೆ. ಅಂತೆಯೇ ಚಾಮರಾಜನಗರ ಜಿಲ್ಲೆಯಲ್ಲಿಯೂ ಸಹ ವರ್ಷದಿಂದ ವರ್ಷಕ್ಕೆ ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ ಮನೆಯನ್ನು ನಿರ್ಮಿಸಿಕೊಳ್ಳುವುದರ ಮೂಲಕ ಅಭಿವೃದ್ಧಿ ಸಾಧಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- *ಚಾಮರಾಜನಗರ ಜಿಲ್ಲಾ ಅಂಕಿ–ಅಂಶಗಳ ನೋಟ ವಾರ್ಷಿಕ ವರದಿ* (2023).
- *ಕರ್ನಾಟಕ ಅಂಕಿ ಅಂಶಗಳ ನೋಟ 2022–23.* ಆರ್ಥಿಕ ಮತ್ತು ಸಾಂಖ್ಯೀಕ ನಿರ್ದೇಶನಾಲಯ ಕರ್ನಾಟಕ ಸರ್ಕಾರ.
- *ಕರ್ನಾಟಕ ಆರ್ಥಿಕ ಸಮೀಕ್ಷೆ ವರದಿ.* (2023). ಆರ್ಥಿಕ ಮತ್ತು ಸಾಂಖ್ಯೀಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ.
- *ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ವಾರ್ಷಿಕ ವರದಿ.* (2023). ಕರ್ನಾಟಕ ಸರ್ಕಾರ.
- Ashraya.karnataka.gov.in/Report/frmSurvey Housless Report.
- https://ashraya.karnataka.gov.in/Report/ConstituencyWiseReport.asp.
- Madan, Manjuprasad C and S.M. Basavaraju An Overview of Rural Housing Schemes in Mysore District, Volume - 12, Issue - 8, August 2024 | e-ISSN: 2347 - 9671| p- ISSN: 2349 – 0187.
- Shivanna T and Ravindranath N. Kadam, Problems and Solutions of Rural Housing in India: An Overview, *Proceedings of International Conference on Science, Engineering, Management and Humanities*, pp. 1-5, 2018.
- Srinivas Daketi and Ramesh Srikonda A critical review of consideration of housing design in rural housing policies and programs in India, ISSN: 2454-132X, Volume 7, Issue 2 - V7I2-1415.
- Sudipta Biswas, The Role of Indira Awaas Yojana in Addressing Rural Homelessness: An Evaluation, ISSN:2349-6711(Print),Volume-II,Issue-II, September 2015, Page No. 364-374